



ತೆಗೆಯಲೇಬೇಕೆಂದು ಕಾಯುತ್ತಿದ್ದ ನನಗೆ ಸ್ವರ್ಗವೇ ಬೊಗಸೆಗೆ ಬಂದ ಹಾಗಾಯಿತು.

ಮಲೆನಾಡು, ಕರಾವಳಿಯ ಪಶ್ಚಿಮಘಟ್ಟ, ಕುರುಚಲು ಕಾಡು, ಅರೆಪಟ್ಟಣಗಳ ದಟ್ಟವಾದ ಪೊದೆಗಳಿರುವ ಪ್ರದೇಶಗಳಲ್ಲಿ ಚಳಿಗಾಲ ಆರಂಭವಾದರೆ ಸಾಕು, ವೀ ಟ್ಯೂ ವೀ ಟ್ಯೂ ಎಂದು ಒಂದೇ ಲಯದಲ್ಲಿ ಸಿಳ್ಳೆ ಹಾಕುವ ವಲಸೆ ಹಕ್ಕಿ ನವರಂಗದ ಸದ್ದು ಕೇಳಿಯೇ ಕೇಳುತ್ತದೆ. ಪಾತ್ರೆ ತೊಳೆಯುವಾಗ ಬೀಳುವ ಅನ್ನದ ಅಗುಳುಗಳನ್ನು, ಒದ್ದೆ ನೀರಿನಲ್ಲಿ ಹುಟ್ಟುವ ಕೀಟ–ಹುಳಗಳನ್ನು ಹೆಕ್ಕಿತಿನ್ನುತ್ತ ಸ್ಥಳೀಯ ಹಕ್ಕಿಗಳಂತೆ ಸಾಮಾನ್ಯರಲ್ಲಿ ಸಾಮಾನ್ಯ ಎನ್ನುವಂತೆ ಕಾಣಿಸುವ ನವರಂಗ ಹಕ್ಕಿ, ಸಾಮಾನ್ಯ ಹಕ್ಕಿಯಂತೂ ಅಲ್ಲವೇ ಅಲ್ಲ. ಹಿಮಾಲಯ ಪರ್ವತದ ತಪ್ಪಲುಗಳಿಂದ ಸುದೀರ್ಘ ಪಯಣ ಮಾಡಿ ನಮ್ಮೂರಿಗೆ ಅತಿಥಿಯಾಗಿ ಬರುವ ಅಸಾಮಾನ್ಯ ಹಕ್ಕಿ.

ನವರಂಗದ ಒಂದೊಂದು ಬಣ್ಣವೂ ವರ್ಣನಾತೀತ, ಇದರ ಗರಿಗಳ ಬೀಸು, ಹಾಡು, ಕೇಕೆ, ಜೀಕು ಎಲ್ಲವೂ ಅಮೋಘ. ನವ ಬಣ್ಣಗಳಿಂದ ರಂಗೇರಿ ಪಕ್ಷಿ ವೀಕ್ಷಕರಿಗೆ, ಪಕ್ಷಿ ಛಾಯಾಗ್ರಾಹಕರಿಗೆ ಅಷ್ಟು ಸುಲಭಕ್ಕೆ ಸಿಗದೇ ಆಟ ಆಡಿಸುತ್ತ, ಕಾಡಿಸುತ್ತ ಅಪರೂಪಕ್ಕಷ್ಟೇ ಪೋಸು ಕೊಡುವ ನವರಂಗ ಹಕ್ಕಿ, ನಮ್ಮ ಭಾರತದ ಅತ್ಯಂತ ಸುಂದರ ಹಕ್ಕಿಗಳ ಪಟ್ಟಿಯಲ್ಲಿದೆ. ಆಂಗ್ಲ ಭಾಷೆಯಲ್ಲಿ ಇಂಡಿಯನ್ ಪಿಟ್ಟಾ, ಕನ್ನಡದಲ್ಲಿ ನವರಂಗ, ನವರಂಗಿ, ಹನಾಲು ಗುಬ್ಬಿ ಅಂತ ಕರೆಸಿಕೊಳ್ಳುವ ಈ ಹಿಮಾಲಯದ ರಾಜನಿಗೆ ನಾಚಿಕೆ ಕೊಂಚ ಜಾಸ್ತಿ. ಹಾಗಾಗಿ ಮನುಷ್ಯ ಚಟುವಟಿಕೆ ಅಷ್ಟಾಗಿರದ ನಸುಕಿನ ಕತ್ತಲಲ್ಲಿ, ಮುಸ್ಸಂಜೆ ವೇಳೆಯಲ್ಲಿ ಇದರ ಉತ್ಸಾಹ ಕೊಂಚ ಜಾಸ್ತಿ. ಆಗ ಮರೆಯಲ್ಲಿ ನಿಂತು ಕಣ್ಣರಳಿಸಿ ನೋಡಿದರೆ ನವರಂಗದ ರಂಗಿನಾಟದ ದರ್ಶನವಾಗುತ್ತದೆ.

## ಒಂಬತ್ತು ಬಣ್ಣದಿಂದ ‘ನವರಂಗ’ವಾಯಿತು!

ಹಳದಿ ಎದೆ, ರೆಕ್ಕೆಯಲ್ಲಿ ಆಕಾಶ ನೀಲಿ, ಹಸುರು, ರೆಕ್ಕೆ ತುದಿಯಲ್ಲಿ ಗಾಢ ನೀಲಿ, ಗಾಢ ರಕ್ತವರ್ಣ, ತಲೆಗೆ ಕಪ್ಪು ಮತ್ತು ಕಂದು ಬಣ್ಣ, ಬಿಳಿ ಕೊರಳು, ಕಿತ್ತಲೆ ಕೆಂಪು ಮತ್ತು ಅಚ್ಚ ಹಳದಿ ಹೊಟ್ಟೆ ಹೀಗೆ ಒಂಬತ್ತು ಬಣ್ಣಗಳಿಂದ ಮೈಮನ ಸೆಳೆಯುವ ಚಂದುಳ್ಳಿ ಹಕ್ಕಿಯಿದು. ನವೆಂಬರ್–ಮೇ ತಿಂಗಳವರೆಗೂ ಕರಾವಳಿ, ಮಲೆನಾಡಿನ ಕಾಡುಗಳಲ್ಲಿ, ಮರಗಳಿರುವ ನೆಲಗಳಲ್ಲಿ ಜಿಗಿಯುತ್ತ, ತನಗೆ ಹಾರುವುದಕ್ಕೆ ಬರುವುದಿಲ್ಲ ಎನ್ನುವಂತೆ ನೆಲದಲ್ಲೇ ಕುಪ್ಪಳಿಸುತ್ತ ಪುಷ್ಕಳ ಭೋಜನ ಮಾಡುವ ನವರಂಗ ಹಕ್ಕಿ, ತನ್ನ ಪುಟ್ಟ ಬಾಲವನ್ನಾಡಿಸಿದರೆ ನೀಲಿ, ಕೆಂಪು, ಹಳದಿ ಬಣ್ಣಗಳೆಲ್ಲಾ ಸೇರಿ ಬಾಲದ ತುದಿಯಲ್ಲಿ ರಂಗೋಲಿ ಹಾಕಿದಂತೆ; ವೀ ಟ್ಯೂ ವೀ ಟ್ಯೂ ಎಂದು ಕೂಗಿದರೆ ಸಪ್ತಸ್ವರಗಳ ಮಳೆಗರೆದಂತೆ. ಜಿಗ್ಗೆಂದು ಹಾರಿಹೋದರೆ ಒಂಬತ್ತು ಬಣ್ಣಗಳ ಕನಸೊಂದು ಕಣ್ಣೆದುರೇ ನನಸಾದಂತಹ ಅನುಭೂತಿ.

## ಉಳಿಯಲಿ ಹಸುರು, ಹಾರಲಿ ಹಕ್ಕಿ

‘ಅಬ್ಬಾ... ಇಲ್ಲೆಲ್ಲಾ ಮನುಷ್ಯ ಮರ ಕಡಿದು, ನನ್ನ ನೆಲೆಯನ್ನೇ ಹಾಳು ಮಾಡಿದ್ದಾನೆ. ಮುಂದೊಂದು ದಿನ ಹಿಮಾಲಯದಿಂದ ಈ ಕಡೆಗೆ ವಲಸೆ ಬಂದರೆ ಈ ಕಾಡು, ಮರ ಎಲ್ಲಾ ಇರುತ್ತದೋ ಇಲ್ಲವೋ! ನಾನಷ್ಟೇ ಅಲ್ಲ, ಎಲ್ಲೆಲ್ಲಿಂದಲೋ ಇಲ್ಲಿನ ಕಾಡುಗಳಿಗೆ ವಲಸೆ ಬರುವ ನನ್ನ ಒಡನಾಡಿ ಗೆಳೆಯರಿಗೆ ಹಸುರನ್ನು ಹುಡುಕಲು ಪರದಾಡುವ ಸ್ಥಿತಿ ದಯವಿಟ್ಟೂ ತರಬೇಡಿ ಓ ಮನುಷ್ಯರೇ’ ಎಂದು ನವರಂಗದಂತಹ ನೂರಾರು ಹಕ್ಕಿಗಳು ತಮ್ಮ ಮೂಕಭಾಷೆಯಲ್ಲಿಯೇ ಅದೆಷ್ಟು ಸಲ ನಮಗೆ ಮನವಿ ಮಾಡಿದ್ದಾವೋ? ಆದರೆ ಆ ಮೂಕಭಾಷೆಯನ್ನು ಅರ್ಥ ಮಾಡಿಕೊಳ್ಳುವ, ನಮ್ಮನ್ನು ಪೊರೆಯುವ ಇಂತಹ ನೂರಾರು ಹಕ್ಕಿಗಳ ಬದುಕನ್ನು ನೋಡುವ ಸ್ಥೈರಣೆ ನಮ್ಮಲ್ಲೆಲ್ಲಿದೆ? ಹಕ್ಕಿಗಳಿಗೆ ಬದುಕುವ ಹಕ್ಕಿದೆ, ಅದಕ್ಕಾಗಿ ಮರ ಉಳಿಸೋಣ, ನಾವು ದೊಡ್ಡದೊಡ್ಡ ಮನೆ ಕಟ್ಟುತ್ತೇವೆ, ಅದು ಪುಟ್ಟ ಗೂಡನ್ನಾದರೂ ಕಟ್ಟಲಿ ಎನ್ನುವ ಪ್ರಜ್ಞೆ ನಮ್ಮಲ್ಲಿ ಹುಟ್ಟುವುದಾದರೂ ಯಾವಾಗ?

ಕರಾವಳಿ ಮಲೆನಾಡುಗಳಲ್ಲೂ ಈಗ ಬಿಸಿಲಿನ ಕಾವು ಏರಿದೆ. ಮುಂಗಾರು ಮಳೆಯ ಪೂರ್ವಸೂಚನೆ ಸಿಕ್ಕಿದ ಕೂಡಲೇ ನವರಂಗ ಹಕ್ಕಿಗಳು ಮತ್ತೆ ತಮ್ಮ ಮೂಲ ಪ್ರದೇಶಗಳತ್ತ ವಲಸೆ ಹೋಗುತ್ತವೆ. ಮೊನ್ನೆ ಒಂದು ನವರಂಗ ಹಕ್ಕಿ, ನೀರು ಕುಡಿದು ಆಕಾಶ ನೋಡುತ್ತ ಸಿಳ್ಳೆ ಹಾಡು ಹಾಡುತ್ತಿತ್ತು. ‘ಬೇಗ ಬಾ ಮಳೆರಾಯ, ನೀ ಧರೆಗೆ ಬಂದದ್ದೇ ನಾವು ಇಲ್ಲಿಂದ ಮರಳಿ ತವರೂರಿಗೆ ಹೋಗುತ್ತೇವೆ’ ಎಂದು ಮಳೆರಾಯನಿಗೆ ಮನವಿ ಮಾಡುತ್ತಿದೆಯೇನೋ ಅನ್ನಿಸಿತು.

ಪ್ರತಿಕ್ರಿಯಿಸಿ: feedback@sudha.co.in


